ಅದೃಶ್ಯನಾಗಿಬಿಟ್ಟಿದ್ದೇನೆ. ಮದುವೆ ಮುಗಿಯುವುದರಲ್ಲಿ ಇನ್ನೂ ಏನೇನಾಗುವುದಿದೆಯೋ. ಯಾರ್ಯಾರ ಕಾಲು ಹಿಡಿಯಬೇಕಿದೆಯೋ, ಈ ಮಕ್ಕಳಿಂದಾಗಿ. ವರಮಹಾಶಯರುಗಳನ್ನ ಅವರ ಬಳಗವನ್ನ ಸುಧಾರಿಸುವ ಗಡಿಬಿಡಿಯಲ್ಲೂ ಎರಡನೆಯವಳ ಕಡೆಗೆ ಒಂದು ಕಣ್ಣಿಟ್ಟಿರಲೇಬೇಕು. ಒಂದು ವಾರದಿಂದ ನಾನೂ ಈಕೆ ಅವಳ ಕಾವಲಿಗೆಂದೇ ಎರಡು ಕಣ್ಣುಗಳನ್ನೂ ಮುಡಿಪಾಗಿಟ್ಟು ಬಿಟ್ಟಿದ್ದೇವೆ. ಹುಂ... ಒಳ್ಳೆ ಮಕ್ಕಳು ಹುಟ್ಟಲೂ ಪುಣ್ಯ ಮಾಡಿರಬೇಕು. ನಿಟ್ಟುಸಿರು ಬಿಡುತ್ತ ಬಾಗಿಲ ಕಡೆ ಬರುವಾಗ ಈಕೆ ಕಾಣುತ್ತಾಳೆ. ಅವಳ ಮುಖ ರಸಹೀರಿದ ಕಬ್ಬಿನಸಿಪ್ಪೆಯಂತಾಗಿದೆ. ಮುಖ ನೋಡುತ್ತಾಳೆ. ಅವಳ ಕಣ್ಣುಗಳೆರಡು ಪ್ರಶ್ನೆಗಳಾಗುತ್ತವೆ.

'ಧೈರ್ಯವಾಗಿರು ಭಾಗ್ಯ... ರಾಯರು ಖಂಡಿತ ಕಾಪಾಡುತ್ತಾರೆ' ಅಂತ ಪಿಸುಗುಟ್ಟುತ್ತೇನೆ– ನಿಜ ಹೇಳಬೇಕೆಂದರೆ ದೇವರ ಬಗ್ಗೆ ನನಗೇ ನಂಬಿಕೆಯಿಲ್ಲ.

'ಹಾಳಾದೋಳು ಬೆಳಿಗ್ಗೆಯೂ ಸರಿಯಾಗಿ ಊಟ ಮಾಡಲಿಲ್ಲ ಕಣ್ರಿ. ಒಂದು ವಾರವಾಯ್ತು ಅವಳು ಸರಿಯಾಗಿ ಮಾತ್ನಾಡ್ದೆ, ನಗದೆ' ಭಾಗ್ಯ ಎರಡನೆ ಮಗಳ ಬಗ್ಗೆಯೇ ಹೇಳುತ್ತಿದ್ದಾಳೆ. 'ನಿನ್ನೆ ನೆಂಟರಿಷ್ಟರ ಜೊತೆ ಚೆನ್ನಾಗಿಯೇ ಮಾತಾಡ್ತಾ ಇದ್ದಳಲ್ಲೆ. ನಗುತಾನೂ ಇದ್ಲು' ಅನ್ನುತ್ತೇನೆ– ಧೈರ್ಯ ತಂದುಕೊಳ್ಳಲೋಸುಗ.

'ಎಲ್ಲಾ ಬೇಕಾಬಿಟ್ಟಿ. ಏನಂದ್ರೂ ನಾಟಕ ಆಡ್ತಾ ಇದಾಳೆ ಅಂತ ನಂಗೆ ಭಯವಾಗ್ತಾ ಇದೇರಿ. ನಾನಂತೂ ಅವಳು ಬಚ್ಚಲ ಮನೆಗೆ ಹೋದರೂ ನಿಗಾ ಇಟ್ಟಿರ್ತೇನೆ' –ಕಣ್ಣೀರು ಒರೆಸಿಕೊಳ್ಳುತ್ತಾಳೆ ಭಾಗ್ಯ.

'ಹುಶ್... ಆಯ್ತುಬಿಡು. ನಾನು ಹೊರಗೇ ಇರ್ತೇನೆ. ಇವತ್ತೊಂದು ದಿನ ಜಾಗರಣೆಯಾಗಿ ಬಿಡ್ಲಿ ಭಾಗ್ಯ. ಅವಳ ಕೊರಳಿಗೆ ತಾಳಿ ಬಿದ್ದುಬಿಡ್ಲಿ. ಆಮೇಲೆ ದೈವೇಚ್ಛೆ ಇದ್ದದ್ದಾಗಲಿ'– ಮೆದುವಾಗಿ ಅವಳ ಭುಜ ತಟ್ಟಿ ಹೊರಬರುತ್ತೇನೆ. ಸಂಜೆ ಮಳೆ ಹೊಯ್ದದ್ದರಿಂದಲೋ ಏನೋ ಹಲ್ಲು ಗಿಟಗಿಟಿಸುವಂತಹ ಚಳಿ. ಕತ್ತಲಲಲ್ಲಿ ತಡಕಾಡುತ್ತ ನಡೆದು ಎದುರು ಮನೆಯ ಜಗಲಿ ಮೇಲೆ ಕೂತು ಸಿಗರೇಟ್ ಹಚ್ಚುತ್ತೇನೆ. ಭಾಗ್ಯಳ ಅಳು ಮೋರೆ ಎದುರು ಬಂದಂತಾಗಿ ಗಂಟಲು ಕಟ್ಟುತ್ತದೆ. ಅವಳಿಗೆ ನೋವಾಗದಂತೆ, ಕಷ್ಟವಾಗದಂತೆ ನಾನು ನಡೆದುಕೊಂಡಿದ್ದೇನೆ. ಜೋರಾಗಿ ಗದರಿದ ದಿನವೂ ನೆನಪಿನಲ್ಲಿಲ್ಲ. ಕರಿಬೇವು, ಕೊತ್ತುಂಬರಿ, ಬಾಳೆಎಲೆ, ವೀಳೆಯದೆಲೆಯಿಂದ ಹಿಡಿದು ಗಟ್ಟಿ ಹಾಲು, ಬೆಣ್ಣೆ ತುಪ್ಪ ಸರಬರಾಜು ಮನೆಗೇ ಆಗುತ್ತದೆ. ಎಂಥ ಬೆಲೆ ಏರಿದ್ದರೂ ಪೇಟೆಗಳಲ್ಲಿ ಶಾಸ್ತ್ರಕ್ಕೂ ಸಿಗದ ಸೀಮೆಎಣ್ಣೆ, ಸಕ್ಕರೆ, ಅಕ್ಕಿ, ಬೇಳೆ ಇತ್ಯಾದಿಗಳಿಗೆ ಎಂದಿಗೂ ತಾಪತ್ರಯವಾಗಿದ್ದಿಲ್ಲ. ಡಿಪೋ ಗುಮಾಸ್ತನೇ ಹೊರೆಸಿಕೊಂಡು ಬಂದು ಮನೆಯಲ್ಲಿಟ್ಟು ಹೋಗುತ್ತಾನೆ. ವಿಲೇಜ್ ಅಕೌಂಟೆಂಟ್‌ಗಳಂತೂ ತುಂಬಿದ ಚೀಲಗಳಿಲ್ಲದೆ ನನ್ನ ಮನೆ ಹೊಸ್ತಿಲು ತುಳಿಯಲೂ ಅಂಜುತ್ತಾರೆ. ಆಫೀಸಿನಲ್ಲೂ ಅಷ್ಟೆ. ನನ್ನ ಮೇನೇಜರ್‌ಗಿರಿಗೆ ಗುಮಾಸ್ತರು ಬಾಲ ಮುದುರಿಕೊಳ್ಳುತ್ತಾರೆ. ಜಿಲ್ಲಾಧಿಕಾರಿಗಳೇ ಸ್ವತಹ ಕರೆಸಿ, ಕೂರಿಸಿಕೊಂಡು, 'ಮಿಸ್ಟರ್ ಕೃಷ್ಣಸ್ವಾಮಿ, ನೋಡಿ ಈ ಡ್ರಾಫ್ಟ್ ಸರಿಗಿದೆಯೇನೋ?' ಅಂತ ಸಲಹೆ ಪಡೆಯುತ್ತ, ಸ್ನೇಹದ ನಗೆ ಸೂಸುತ್ತಾರೆ. ಚುನಾವಣೆ ದಿನದ ಬಂದೋಬಸ್ತಿನ ಬಗ್ಗೆ ಮತಕಟ್ಟೆಗೆ ಅಧಿಕಾರಿಗಳನ್ನ ನೇಮಿಸುವ ಬಗ್ಗೆ ಪ್ರೈವೇಟ್ ಆಗಿ ಚರ್ಚಿಸುವಾಗ ಎಳೆನಿಂಬೆ ಗುಮಾಸ್ತರಿಗಳಿಗಂತೂ ಹೊಟ್ಟೆಯಲ್ಲಿ ಕಿಚ್ಚು. ನನ್ನ ವಿರುದ್ಧ ಪಿತೂರಿ ಮಾಡಲೂ ಧೈರ್ಯವಿಲ್ಲ ಇವಕ್ಕೆ. ಇಂಗ್ಲೀಷ್‌ನಲ್ಲಿ ಸರಿಯಾಗಿ ಒಂದು ವಾಕ್ಯ ಬರೆಯೋ ಯೋಗ್ಯತೆಯಿಲ್ಲದಿದ್ದರೂ ಎಲ್ಲಾ ಪದವೀಧರರುಗಳೇ. ನನ್ನ ಮೇಜಿನ ಮುಂದಂತೂ ಅಂಗಡಿ ಮಾಲೀಕರ, ಸಿನಿಮಾ